**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ 490 /2023**

ಚಾ.ಸಾ–9, ಫ್ರಾ.ಸಾ–03

| | | |
|---|---|---|
| ಹೆಸರು | : | ಡಾ. ರಮ್ಯ |
| ಗಂಡನ ಹೆಸರು | : | ಶರತ್ ಕುಮಾರಿ |
| ವಯಸ್ಸು | : | 36 |
| ವೃತ್ತಿ | : | ವೈದ್ಯಾದಿಕಾರಿ |
| ವಾಸ | : | ತಿ.ನರಸೀಪುರ |

**ದಿನಾಂಕ 18.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದಃ**

ಕಳೆದ ನಾಲ್ಕು ವರುಷದಿಂದ ನಾನು ತಿ.ನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೆನೆ.

ದಿಃ 02.02.2023 ರಂದು ಸಂಜೆ 4.30 ಗಂಟೆಗೆ ಚಾಸಾ 1 ರವರು ಹಲ್ಲೆ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಚಾಸಾ 4 ರವರು ಕರೆದುಕೊಂಡು ಬಂದಿದ್ದು ಅವರನ್ನು ಪರೀಕ್ಷಿಸಲಾಗಿ ಅವರ ಮೈ ಮೇಲೆ ಯಾವುದೇ ಗಾಯ ಕಂಡು ಬಂದಿರುವುದಿಲ್ಲ. ಅವರ ಎದೆಯ ಕ್ಷ ಕಿರಣ ತೆಗೆಸಲಾಗಿ ಯಾವುದೇ ಮೂಳೆ ಮುರಿತ ಕಂಡು ಬಂದಿರುವುದಿಲ್ಲ. ನನ್ನ ಅಭಿಪ್ರಾಯದ ಪ್ರಕಾರ ಚಾಸಾ 1 ರವರಿಗೆ ಸಾದಾ ಗಾಯವಾಗಿರುತ್ತದೆ. ಈ ಬಗ್ಗೆ

ನಾನು ಗಾಯದ ಪ್ರಮಾಣ ಪತ್ರವನ್ನು ನಿಪಿ 4 ಎಂದು ಗುರುತಿಸಿ, ನನ್ನ ಸಹಿಯನ್ನು 4 ಎ ಎಂದು ಗುರುತಿಸಲಾಯಿತು.

ಒಬ್ಬ ವ್ಯಕ್ತಿಗೆ ತಲೆಯಿಂದ ಅವರ ಎದೆಗೆ ಗುದ್ದಿದರೆ ಸಾದಾ ಗಾಯ ಆಗುವ ಸಂಭವ ಇದೆ.

**<u>ಪಾಟೀ ಸವಾಲು : ಶ್ರೀ ಬಿ ಆರ್ ವಕೀಲರಿಂದ ಆರೋಪಿತರ ಪರವಾಗಿ:</u>**

ಒಬ್ಬ ವ್ಯಕ್ತಿ ಗಟ್ಟಿ ವಸ್ತುವಿನ ಮೇಲೆ ಬಿದ್ದರೆ ಎದೆಗೆ ನಿಪಿ 4 ರಲ್ಲಿ ಹೇಳಿದಂತೆ ಸಾದಾ ಗಾಯ ಆಗುವ ಸಂಭವ ಇರುತ್ತದೆ ಎಂದರೆ ಸರಿ. ಪಿರ್ಯಾದುದಾರರಿಗೆ ಅನುಕೂಲವಾಗಲೆಂದು ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ,**
**ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ 490 /2023**

ಚಾ.ಸಾ-8, ಪ್ರಾ.ಸಾ-04

| | | |
|---|---|---|
| ಹೆಸರು | : | ಶ್ರೀನಿವಾಸ |
| ತಂದೆಯ ಹೆಸರು | : | ತಮ್ಮಣ್ಣ |
| ವಯಸ್ಸು | : | 46 |
| ವೃತ್ತಿ | : | ಪಿ ಡಿ ಓ |
| ವಾಸ | : | ಕೊತ್ತೇಗಾಲ |

**ದಿನಾಂಕ 18.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದಃ**

2023 ರಿಂದ ಇಲ್ಲಿಯವರೆಗೆ ನಾನು ಕೊತ್ತೆಗಾಲ ಗ್ರಾಮ ಪಂಚಾಯತಿಯಲ್ಲಿ ಪಿ ಡಿ ಒ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 03.10.2023 ರಂದು ತಿ.ನರಸೀಪುರ ಠಾಣೆಯಿಂದ ಚಾಸಾ 1 ರವರು ವಾಸವಾಗಿರುವ ಮನೆಯ ದಾಖಲೆ ಕೇಳಿದ್ದು, ಆ ಪ್ರಕಾರ ನಾನು ಚಾಸಾ 1 ರವರ ವಾಸವಾಗಿರುವ ಪಂಚಾಯತಿ ನಿವೇಶನ ಸಂಖ್ಯೆ 250/5, 250/6 ರ ಬಗ್ಗೆ ಡಿಮಾಂಡ್ ರಿಜಿಸ್ಟಾರ್ ನ್ನು ಕೊಟ್ಟಿದ್ದು ಈಗ ಅದನ್ನು ನಿಪಿ 5 ಎಂದು ಗುರುತಿಸಿ , ನನ್ನ ಸಹಿಯನ್ನು ನಿಪಿ 5 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಶ್ರೀ ಬಿ ಆರ್ ವಕೀಲರಿಂದ ಆರೋಪಿತರ ಪರವಾಗಿ:</u>**

ನಿಪಿ 5 ರಲ್ಲಿ ಚಾಸಾ 1 ರವರ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ. ಚಾಸಾ 1 ರವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ,**
**ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 490 /2023**

ಚಾ.ಸಾ–4, ಪ್ರಾ.ಸಾ–05

| | | |
|---|---|---|
| ಹೆಸರು | : | ಮಹದೇವ ಸ್ವಾಮಿ |
| ತಂದೆಯ ಹೆಸರು | : | ಲೇ. ವಹದೇವಯ್ಯ |
| ವಯಸ್ಸು | : | 40 |
| ವೃತ್ತಿ | : | ಆಟೋ ಚಾಲಕ |
| ವಾಸ | : | ಕೆಬ್ಬೆ ಹುಂಡಿ |

**ದಿನಾಂಕ 18.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದಃ**

ನನಗೆ ಚಾಸಾ 1 ಪರಿಚಯವಿದೆ. ಆರೋಪಿ ನನಗೆ ಗೊತ್ತಿಲ್ಲ. ದಿಃ 02.02.203 ರಂದು ಚಾಸಾ 1 ರವರು ನಾನು ಆಸ್ಪತ್ರೆಗೆ ಹೋಗಬೇಕು ಎಂದು ಹೇಳಿದ್ದಕ್ಕೆ ಅವರನ್ನು ನನ್ನ ಅಟೋದಲ್ಲಿ ಆಸ್ಪತ್ರೆಗೇ ಕರೆದುಕೊಂಡು ಹೋದೆ. ಚಾಸಾ 1 ರವರು ನನಗೆ ಆರೋಪಿ ಪಂಚಾಯತಿಯಲ್ಲಿ ಗಲಾಟೆ ಮಾಡಿರುತ್ತಾರೆ ಎಂದು ಹೇಳಿದರು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ ಬಿ ಆರ್ ವಕೀಲರಿಂದ ಆರೋಪಿತರ ಪರವಾಗಿ:**

ಚಾಸಾ 1 ನನ್ನ ತಮ್ಮ ಎಂದರೆ ಸರಿ. ನಾನು ಖಾಸಗಿ ಬಸ್ ನಿಲ್ದಾಣದಲ್ಲಿ ಇದ್ದೆ. ನಾನು ಗಲಾಟೆಯನ್ನು ನೋಡಿಲ್ಲ. ನಾನು ಯಾವುದೇ ಗಲಾಟೆಯನ್ನು

ನೋಡದಿದ್ದರೂ ಚಾಸಾ 1 ನನ್ನ ಸಂಬಧಿಯಾಗಿದ್ದರಿಂದ ಅವರಿಗೆ ಅನುಕೂಲ ವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ,**
**ತಿ.ನರಸೀಪುರ**